ದಿನಾಂಕ: 06-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಫಿರ್ಯಾದುದಾರರ ಪರ: ಶ್ರೀ. ಬಿಕೆವಿ., ವಕೀಲರಿಂದ:**

2020 ನೇ ಇಸವಿಯಿಂದ ತಿಂಗಳು ನನಗೆ ನೆನಪಿಲ್ಲ, ನನ್ನ ಹಾಗೂ ಫಿರ್ಯಾದಿಯ ನಡುವೆ ಮಾತುಕತೆ ಹಾಗೂ ಹಣಕಾಸಿನ ವ್ಯವಹಾರ ಇರಲಿಲ್ಲ. ಆದನಂತರ ಪುನಃ ನಮ್ಮಲ್ಲಿ ಯಾವುದೇ ಮಾತುಕತೆ ಅಥವಾ ಯಾವುದೇ ವ್ಯವಹಾರ ಆಗಿರುವುದಿಲ್ಲ. ಕಾಫಿ ಸೀಸನ್ ಪ್ರಾರಂಭದಲ್ಲಿ ನಮ್ಮಲ್ಲಿ ಮಾತುಕತೆ ಇತ್ತು. ಸದರಿ ಕಾಫಿ ಸೀಸನ್ ಮುಗಿದ ನಂತರ ನಮ್ಮಲ್ಲಿ ಯಾವುದೇ ಮಾತುಕತೆ ಇರಲಿಲ್ಲ ಎಂದರೆ ಏಪ್ರಿಲ್, ಮೇ ನಂತರ ನಮ್ಮಲ್ಲಿ ಮಾತುಕತೆ ಇರಲಿಲ್ಲ.

ಮೂಲ ಖಾತೆದಾರರು ಸಂಪತ್ ಕುಮಾರ್ ಅವರ ಸಹೋದರ ಯಾರು ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ಸಂಪತ್ ಕುಮಾರ್ ಹಾಗೂ ಅವರ ಸಹೋದರರಿಗೆ ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ಎಷ್ಟು ಜಮೀನುಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸಂಪತ್ ಕುಮಾರ್ ಹಾಗೂ ಅವರ ಸಹೋದರರಿಗೆ ಯಾವ ಯಾವ ಜಮೀನುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಜಮೀನು ಇದೆ ಎಂಬ ಬಗ್ಗೆ ನನಗೆ ಮಾಹಿತಿಯಿಲ್ಲ. ಸದರಿ ಅಗ್ರಿಮೆಂಟ್ ನಲ್ಲಿ ಯಾವ ಯಾವ ಸರ್ವೆ ನಂಬರುಗಳಲ್ಲಿ, ಎಷ್ಟೆಷ್ಟು ಮರಗಳು, ಎಷ್ಟೆಷ್ಟು ಬೆಲೆಗೆ, ಯಾರು ಯಾರು ಫಿರ್ಯಾದುದಾರರಿಗೆ ಕೊಡಬೇಕು ಎಂದು ನಮೂದಾಗಿರುತ್ತದೆ ಎಂಬ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ್ 57 ಸಂಪತ್ ಕುಮಾರ್ ಅವರಿಗೆ ಸಂಬಂಧಿಸಿದ ಜಮೀನಿಗೆ ಅಗ್ರಿಮೆಂಟ್ ಆಗಿರುತ್ತದೆ. ಸರ್ವೆ ನಂಬರ್ 57 ಕ್ಕೆ ಸಂಬಂಧಿಸಿದ್ದು ಎಂದು ರಮೇಶ್ ಅವರು ನನಗೆ ತೋರಿಸಿರುತ್ತಾರೆ. ಹರೀಶ್ ಮತ್ತು ಸಂತೋಷ್ ಅವರನ್ನು ನಾನು ಕರೆದುಕೊಂಡು ಬಂದಿರುವ ಬಗ್ಗೆ ಸದರಿ ಅಗ್ರಿಮೆಂಟ್ ನಲ್ಲಿ ಮಾಹಿತಿ

ಇರುತ್ತದೆಯೇ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಹರೀಶ್ ಮತ್ತು ಸಂತೋಷ್ ಅವರು ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜನವರಿ - 2020 ರಂದು ನಾನು ಹರೀಶ್ ಮತ್ತು ಸಂತೋಷ್ ಅವರಿಗೆ ಸದರಿ ಅಗ್ರಿಮೆಂಟ್ ಗೆ ಬರಬೇಕೆಂದು ತಿಳಿಸಿರುತ್ತೇನೆ. ಸದರಿ ಅಗ್ರಿಮೆಂಟ್ ಆದ ದಿನಾಂಕದಂದು ಒಟ್ಟಾಗಿ ರೂ.25,000/- ಗಳನ್ನು ಹರೀಶ್ ಮತ್ತು ಸಂತೋಷ್ ಅವರಿಗೆ ನೀಡಲಾಗಿರುತ್ತದೆ. ಅವರು ಜನವರಿಯಿಂದ ಏಪ್ರಿಲ್ ತಿಂಗಳವರೆಗೂ ಕೆಲಸವನ್ನು ಮಾಡಿರುತ್ತಾರೆ. ಫಿರ್ಯಾದುದಾರರು ಹರೀಶ್ ಮತ್ತು ಸಂತೋಷ್ ಅವರಿಗೆ ಒಟ್ಟು ರೂ.95,000/- ಗಳನ್ನು ನೀಡಿರುತ್ತಾರೆ. ಎಷ್ಟು ಮೊತ್ತದ ಕೆಲಸ ಏಪ್ರಿಲ್ ತಿಂಗಳವರೆಗೂ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಉಳಿದಂತಹ ರೂ.70,000/-ಗಳನ್ನು ಅವರು 3 ರಿಂದ 4 ಬಾರಿ ನೀಡಿರುತ್ತಾರೆ. ಸದರಿ ಅಗ್ರಿಮೆಂಟನ್ನು ರಮೇಶ್ ಅವರು ನನಗೆ ಜನವರಿ - 2020 ರಂದು ನೀಡಿರುತ್ತಾರೆ. ಸದರಿ ಅಗ್ರಿಮೆಂಟ್ ನಲ್ಲಿ ನನಗೆ ಈ ರೀತಿ ಜನವರಿ - 2020 ರಂದು ಕೊಟ್ಟಿರುವ ಬಗ್ಗೆ ನಮೂದಾಗಿರುತ್ತದೆಯೇ ಎಂದರೆ ನನಗೆ ಗೊತ್ತಿಲ್ಲ.

ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟೆಷ್ಟು ಮರಗಳನ್ನು ಅರಣ್ಯ ಇಲಾಖೆಯವರು ಕಡಿತಲೆ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಗ್ರಿಮೆಂಟಿನಲ್ಲಿ ನಮೂದಾಗಿರುವ ಚೆಕ್ ಯಾವ ಬ್ಯಾಂಕಿನದ್ದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹರೀಶ್ ಹಾಗೂ ಫಿರ್ಯಾದುದಾರರ ನಡುವೆ ಆಗಿರುವ ಅಗ್ರಿಮೆಂಟ್ ರದ್ದಾಗಿರುವ ವಿಚಾರ ನನಗೆ ಗೊತ್ತಿಲ್ಲ. ಹರೀಶ್, ಸಂತೋಷ್ ಹಾಗೂ ಫಿರ್ಯಾದುದಾರ ನಡುವೆ ಈ ರೀತಿ ಯಾವುದೇ ಅಗ್ರಿಮೆಂಟ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರ ಹತ್ತಿರ ಕೆಲಸ ಮಾಡುವಾಗ ತುಂಬಾ ವಿಶ್ವಾಸದಲ್ಲಿ ಇದ್ದೆ ಎಂದರೆ ಸರಿ. ಸದರಿ ವಿಶ್ವಾಸದ ಆಧಾರದ ಮೇಲೆ ನಾನು ದಿನಾಂಕಃ 03/01/2020 ರಂದು ಫಿರ್ಯಾದುದಾರರಿಂದ ರೂ.2,65,000/- ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು 5 ತಿಂಗಳುಗಳ ಒಳಗೆ ಮರುಪಾವತಿ

ಮಾಡುತ್ತೇನೆ ಎಂದು ಫಿರ್ಯಾದುದಾರರಿಗೆ ಭರವಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಹಣವನ್ನು ಮರುಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ನನಗೆ ಪದೇ ಪದೇ ಅದನ್ನು ವಾಪಾಸು ಕೇಳಿದಾಗ ನಾನು ಅವರಿಗೆ ನಿಪಿ.1 ರಂತೆ ಚೆಕ್ಕನ್ನು ದಿನಾಂಕಃ14/08/2020 ರಂದು ರೂ.2,65,000/-ಗಳಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ದಿನಾಂಕಃ14/08/2020 ರಂದು ಫಿರ್ಯಾದುದಾರರು ಸದರಿ ಚೆಕ್ಕನ್ನು ಕರ್ನಾಟಕ ಬ್ಯಾಂಕ್, ಬಾಳೆಹೊನ್ನೂರು ಶಾಖೆಯಲ್ಲಿ ಹಾಜರುಪಡಿಸಿದಾಗ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ ನಗದೀಕರಣ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಖಾತೆಯಲ್ಲಿ ನಿಪಿ.1 ರ ಚೆಕ್ಕಿನಲ್ಲಿ ನಮೂದಾಗಿರುವ ರೂ.2,65,000/-ಗಳು ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ.1 ರ ಚೆಕ್ ನಾನು ಭದ್ರತೆಗಾಗಿ ನೀಡಿರುವ ಚೆಕ್ ಆಗಿರುತ್ತದೆ. ಈ ರೀತಿ ಚೆಕ್ ಅಮಾನ್ಯಗೊಂಡ ವಿಷಯ ನನಗೆ ಫಿರ್ಯಾದುದಾರರು ತಿಳಿಸಿದಾಗ ನಾನು ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದರಿಂದ ದಿನಾಂಕಃ 31/08/2020 ರಂದು ಫಿರ್ಯಾದುದಾರರು ನನಗೆ ವಕೀಲರ ಮೂಲಕ ನೋಟಿಸನ್ನು ನೀಡಿದ್ದು ಅದು ದಿನಾಂಕಃ17/09/2020 ರಂದು ನನಗೆ ಜಾರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ರೀತಿ ವಕೀಲರ ಮೂಲಕ ನೋಟಿಸ್ ಜಾರಿಯಾದಾಗ ನಾನು ಫಿರ್ಯಾದುದಾರರ ಮನೆಗೆ ಹೋಗಿ ಮಾತುಕತೆ ಮಾಡಿರುತ್ತೇನೆ, ಅವರು ಸದರಿ ಪ್ರಕರಣವನ್ನು ವಾಪಾಸು ತೆಗೆದುಕೊಳ್ಳುತ್ತೇನೆ ಎಂದು ತಿಳಿಸಿರುತ್ತಾರೆ.

ಆ ಸಮಯದಲ್ಲಿ ಈ ಪ್ರಕರಣ ದಾಖಲಾಗಿರುವುದಿಲ್ಲ. ಈ ರೀತಿ ನನ್ನ ಹತ್ತಿರ ಅಗ್ರಿಮೆಂಟ್ ಇರುವ ವಿಷಯ ಹಾಗೂ ನಿಪಿ.1 ರ ಚೆಕ್ಕನ್ನು ನಾನು ಭದ್ರತೆಗಾಗಿ ನೀಡಿರುವ ಬಗ್ಗೆ ಫಿರ್ಯಾದುದಾರರಿಗೆ ನಾನು ಯಾವುದೇ ತಿಳುವಳಿಕೆ ನೋಟಿಸ್ ಅಥವಾ ಪ್ರತ್ಯುತ್ತರ ನೀಡಿರುವುದಿಲ್ಲ. ಸದರಿ ಚೆಕ್ಕನ್ನು ನಾನು ಭದ್ರತೆಗಾಗಿ ಜನವರಿ - 2020 ರಂದು ನೀಡಿರುತ್ತೇನೆ, ಆದರೆ ದಿನಾಂಕ ನನಗೆ ನೆನಪಿಲ್ಲ. ನಾನು ನಿಪಿ.1 ರಂತೆ

ಚೆಕ್ಕನ್ನು ಭದ್ರತೆಗಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ನಮೂದಾಗಿರುವ ಹಣವನ್ನು ಫಿರ್ಯಾದುದಾರರಿಗೆ ಕೊಡಬಾರದು ಎಂಬ ಉದ್ದೇಶದಿಂದ ನಾನು ಅಗ್ರಿಮೆಂಟ್ ಅನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ.1 ರ ಚೆಕ್ಕನ್ನು ನಾನು ಭದ್ರತೆಗಾಗಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರೂ.2,65,000/-ಗಳನ್ನು ಫಿರ್ಯಾದುದಾರರಿಗೆ ಕೊಡಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರಿಗೆ ಹಣವನ್ನು ಕೊಡಬಾರದು ಎಂಬ ದುರುದ್ದೇಶದಿಂದ ಅಗ್ರಿಮೆಂಟ್ ಆಗಿರುತ್ತದೆ ಹಾಗೂ ನಿಪಿ.1 ಅನ್ನು ಭದ್ರತೆಗಾಗಿ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

: ಮರು ವಿಚಾರಣೆ ಇಲ್ಲ.:

(ದಿನಾಂಕ:06/05/2024ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಃ ಕೊಪ್ಪ.

ಸಾಕ್ಷಿಯ ಸಹಿಃ